ಸಾಲಿಗ್ರಾಮದ ಪರಂಪಳ್ಳಿ ಸೇತುವೆಯ ಅಪೂರ್ಣ ಕೆಲಸ

1119 (1806) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಸಾಲಿಗ್ರಾಮ ಪುರಸಭೆಯ ಪಾರಂಪಳ್ಳಿ ಸೇತುವೆ ಪೂರ್ಣವಾಗಿರುವುದು ನಿಜವೆ; ಹಾಗಿದ್ದಲ್ಲಿ ಯಾವಾಗ ಪೂರ್ಣಗೊಂಡಿರುತ್ತದೆ.

ಆ) ಈ ಸೇತುವೆ ಸಾರ್ವಜನಿಕ ಸಂಚಾರಕ್ಕೆ ಇನ್ನು ಲಭ್ಯವಾಗದೇ ಇರುವುದು ನಿಜವಲ್ಲವೇ; ಹಾಗಿದ್ದಲ್ಲಿ ಯಾವ ಕಾರಣಗಳಿಂದ ಲಭ್ಯವಾಗಿಲ್ಲ, ತಿಳಿಸುವುದು;

ಇ) ಈ ಸೇತುವೆಯ ಎರಡು ಕಡೆಗಳ ಕೂಡು ರಸ್ತೆ ಯಾವಾಗ ಪೂರ್ಣವಾಗಬಹುದು?

ಶ್ರೀ ಜಿ.ಹೆಚ್. ಅಶ್ವತ್ಥ್‌ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಪಾರಂಪಳ್ಳಿ ಸೇತುವೆ ಕಾಮಗಾರಿ ಭಾಗ 1991 ಮೇ ತಿಂಗಳಲ್ಲಿ ಪೂರ್ಣಗೊಂಡಿದ್ದು, ಭಾವಣಿಗೆ ಸಿಮೆಂಟ್ ಕಾಂಕ್ರೀಟ್ ರಕ್ಷಣಾತ್ಮಕ ಪದರವನ್ನು (ವೆರಿಂಗ್ ಕೋಟ್) ಹಾಕುವ ಕೆಲಸ ಬಾಕಿ ಇದೆ. ಮತ್ತು ಕೂಡು ರಸ್ತೆ ಬಾಕಿ ಇರುತ್ತದೆ.

ಆ) ನಿಜ. ಕೂಡು ರಸ್ತೆ ಪ್ರಗತಿಯಲ್ಲಿರುವುದರಿಂದ ಹಾಗೂ ಸೇತುವೆಯ ಮೇಲೆ ರಕ್ಷಣಾತ್ಮಕ ಪದರ ಹಾಕುವುದು ಬಾಕಿ ಇರುವುದರಿಂದ ಸಂಚಾರಕ್ಕೆ ಲಭ್ಯವಾಗಿಲ್ಲ.

ಇ) ಈ ಕಾಮಗಾರಿಯನ್ನು ಪೂರ್ತಿ ಮಾಡಲು 3.22 ಲಕ್ಷ ರೂ.ಗಳ ಹೆಚ್ಚಿನ ಅನುದಾನ ಬೇಕಾಗಿದೆ. ಈ ಸಾಲಿನಲ್ಲಿ 2 ಲಕ್ಷ ರೂ.ಗಳ ಅನುದಾನ ಇದೆ. ಇನ್ನು ಬೇಕಾಗಿರುವ ಹಣವನ್ನು ಅನುದಾನದ ಲಭ್ಯತೆಯ ಮೇಲೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಹರಿಹರ ತಾಲೋಕು ಪಾಳ್ಯ ಪಂಚಾಯತ್ ಸಮಿತಿಯ ಅಧೀನದಲ್ಲಿರುವ ಜಮೀನು

1121 (1893) ಶ್ರೀ ವೈ. ನಾಗಪ್ಪ (ಹರಿಹರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೂಕಿನ ಪಾಳ್ಯ ಗ್ರಾಮದಲ್ಲಿರುವ ತಾಲ್ಲೂಕು ಪಂ. ಸಮಿತಿಯ ಅಧೀನದಲ್ಲಿ ಜಮೀನು ಇದೆಯೇ? ಇದ್ದರೆ ಅದರ ವಿಸ್ತೀರ್ಣತೆ ಎಷ್ಟು ಈ ಜಮೀನನ್ನು ಯಾವ ರೀತಿ ಅಭಿವೃದ್ಧಿಗೊಳಿಸಲಾಗಿದೆ ಮತ್ತು ಯಾವ ಇಲಾಖೆಯ ಉಸ್ತುವಾರಿಗೆ ವಹಿಸಲಾಗಿದೆ.

ಆ) ಸದರೀ ಜಮೀನನ್ನು ಖಾಸಗಿಯವರಿಗೆ ಬೋಗ್ಯಕ್ಕೆ ಜಿಲ್ಲಾಪರಿಷತ್ ಮುಖೇನ ನೀಡಿರುವುದು ನಿಜವಲ್ಲವೇ ಎಷ್ಟು ಹಣಕ್ಕೆ ಮತ್ತು ಎಷ್ಟು ವರ್ಷಕ್ಕೆ, ಬೋಗ್ಯಕ್ಕೆ ಒಪ್ಪಂದಕ್ಕೆ ಕೊಡಲಾಗಿದೆ, ಬೋಗ್ಯದ ಬಿಟ್ಟುಕೊಡಲು ಜಿಲ್ಲಾಪರಿಷತ್ ಕೈಗೊಂಡ ನಿರ್ಣಯಕ್ಕೆ ಕಾರಣಗಳೇನು?

ಇ) ಸಾರ್ವಜನಿಕ ಹಿತಾಶಕ್ತಿಗೆ ವಿರುದ್ಧವಾಗಿ ಜಿ.ಪ. ಕೈಗೊಂಡಿರುವ ಈ ಕ್ರಮವನ್ನು ರದ್ದುಪಡಿಸಿ ಭೂರಹಿತ ಕೃಷಿಕಾರ್ಮಿಕರಿಗೆ ಹಂಚಿಕೆ ಮಾಡುವ ಅಗತ್ಯ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇದೆ. ಸರ್ವೆ ನಂ. 31 / ಪಿ 22 ಎಕರೆ ವಿಸ್ತೀರ್ಣ ತೋಟಗಾರಿಕೆಗಾಗಿ ಇಡಲಾಗಿದೆ. ತೋಟಗಾರಿಕೆ ಇಲಾಖೆಯ ಉಸ್ತುವಾರಿಯಲ್ಲಿದೆ.

ಆ) ದಿನಾಂಕ 29-1-91 ರಂದು ನಡೆದ ಜಿಲ್ಲಾ ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಸಂ. ನಂ. 32 ರಲ್ಲಿರುವ 22 ಎಕರೆ ಜಮೀನನ್ನು ಖಾಸಗಿಯವರಿಗೆ ಬೋಗ್ಯಕ್ಕೆ ಕೊಡಲು ನಿರ್ಧರಿಸಿದ್ದು ನಂತರ ಸರ್ವೆ ನಂ. ಬದಲಾಗಿದೆ ಎಂದು ತಿಳಿದುಬಂದಿದ್ದರಿಂದ ದಿನಾಂಕ 10-10-91ರ ಜಿ.ಪ.ನೆ. ಸಾಮಾನ್ಯ ಸಭೆಯಲ್ಲಿ ಸಂ.ನಂ. 32ರ ಬದಲಾಗಿ 31 ಪಿ ಎಂದು ತಿದ್ದುಪಡಿ ಮಾಡಬಹುದೆಂದು ತೀರ್ಮಾನಿಸಿದ್ದು, ಇದು ಇನ್ನು ಕಾರ್ಯರೂಪಕ್ಕೆ ಬಂದಿಲ್ಲ.

ಮೊದಲನೇ 8 ವರ್ಷಕ್ಕೆ ಎಕರೆ 1ಕ್ಕೆ 330 ರೂ.ಗಳಂತೆ	7260
ಎರಡನೇ 8 ವರ್ಷಕ್ಕೆ ಎಕರೆ ಒಂದಕ್ಕೆ 880 ರೂ.ಗಳಂತೆ	19,360
ಕೊನೆಯ 9 ವರ್ಷಕ್ಕೆ ಎಕರೆ 1ಕ್ಕೆ 1050 ರೂ.ಗಳಂತೆ	23,100
ಒಟ್ಟು	49720

ಒಟ್ಟು 25 ವರ್ಷಗಳು ಬೋಗ್ಯಕ್ಕೆ ಒಪ್ಪಂದವಾಗಿತ್ತು.

ಸದರಿ ಜಮೀನಿನಲ್ಲಿರುವ ತೋಟಗಳು ಸಂಪೂರ್ಣವಾಗಿ ನಾಶವಾಗಿದ್ದು ಅಲ್ಲಲ್ಲಿ ಗುಂಡಿಗಳು ಮತ್ತು ತಗ್ಗುಗಳು ಉಂಟಾಗಿದ್ದು ಇವುಗಳನ್ನು ದುರಸ್ತಿಪಡಿಸಲು ಜಿ.ಪ. ನಿಂದ ಅನುದಾನ ಲಭ್ಯವಿಲ್ಲದಿರುವುದರಿಂದ ಖಾಸಗಿಯವರಿಗೆ ಬೋಗ್ಯಕ್ಕೆ ಕೊಟ್ಟು ಅದರಿಂದ ತಾ.ಪಂ.ಸ. ಗೆ ಆದಾಯ ಮಾಡಿಕೊಳ್ಳುವ ಉದ್ದೇಶದಿಂದ

ಇ) ರದ್ದುಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ದ.ಕ. ಜಿಲ್ಲೆಯಲ್ಲಿ ಐ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ಸಹಾಯಧನ ಬಿಡುಗಡೆ ಬಗ್ಗೆ

1122 (1895) ಶ್ರೀ ವಸಂತ ವಿ. ಸಾಲ್ಯಾನ್ (ಕಾಪು) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91. 1991-92 ರಲ್ಲಿ ಐ.ಆರ್.ಡಿ.ಪಿ. ಯೋಜನೆಯಲ್ಲಿ ಎಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾಗಬೇಕಾದ ಸಹಾಯಧನದ ಬಾಕಿ ಎಷ್ಟು? ಹಾಗೂ ಬಿಡುಗಡೆಯಾಗದಿರಲು ಕಾರಣವೇನು?